ದಿನಾಂಕಃ **11.03.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು ಪ್ರವಾದಿ ಪರ ವಕೀಲರಾದ ಶ್ರೀ ಎಂ.ಆರ್. ಬಿ ರವರಿಂದಃ

ನಾನು **10** ನೇ ತರಗತಿ ವರೆಗೆ ವಿದ್ಯಭಾಸ ಮಾಡಡಿರುತ್ತೇನೆ. ನಾನು ಮೂಲತವಾಗಿ ರಾಜಸ್ಥಾನ ನಿವಾಸಿ. **1993** ನೇ ಇಸವಿಯಲ್ಲಿ ನಾನು ಬೆಂಗಳೂರಿಗೆ ಬಂದು ವಾಸ ಮಾಡುತ್ತಿದ್ದೇನೆ. ನಾನು ಗೃಹಿಣಿ. ನನ್ನ ಪತಿ ಹರಿಕೃಷ್ಣ ರವರು ಗಾಯತ್ರಿನಗರದಲ್ಲಿ ಗಿರವಿ ಅಂಗಡಿಯಲ್ಲಿ ಇಟ್ಟುಕೊಂಡಿದ್ದಾರೆ. ಸದರಿ ಗಿರವಿ ಅಂಗಡಿಯಲ್ಲಿ **1970** ನೇ ಇಸವಿಯಿಂದ ನಡೆಯುತ್ತಿದೆ. ಗಿರವಿ ಅಂಗಡಿಯ ವ್ಯಾಪಾರ ಬಿಟ್ಟು ನಮ್ಮ ಕುಟುಂಬಕ್ಕೆ ಬೇರೆ ಯಾವುದೇ ವ್ಯವಹಾರ ಇರುವುದಿಲ್ಲ. ನಮ್ಮ ಕುಟುಂಬದಲ್ಲಿ ನಾನು, ನನ್ನ ಪತಿ, ಅತ್ತೆ, ಮಾವ ವಾಸ ಮಾಡುತ್ತಿದ್ದೇವೆ. ನನ್ನ ಪತಿ ಮತ್ತು ನನ್ನ ಮಾವ ಒಟ್ಟಿಗೆ ಗಿರವಿ ಅಂಗಡಿ ನಡೆಸುತ್ತಿದ್ದಾರೆ.

**1** ನೇ ಪ್ರತಿವಾದಿ ರಾಮು ರವರು ನನ್ನ ಮಾವನಿಗೆ ಪರಿಚಯ ಇರುತ್ತಾರೆ ಆದರೆ ನನಗೆ ಪರಿಚಯ ಇರುವುದಿಲ್ಲ. **1** ನೇ ಪ್ರತಿವಾದಿ ನನ್ನ ಮಾವ ಮತ್ತು ನನ್ನ ಪತಿಗೆ ಆತ್ಮಿಯರು. ನಮ್ಮ ಜನಾಂಗದಲ್ಲಿ ಕುಟುಂಬದ ಪರವಾಗಿ ಯವುದಾದರ ವ್ಯವಹಾರ ಮಾಡಲು ಪ್ರಾರಂಭಿಸಿದರೆ ಗಂಡು ಮಕ್ಕಳು ಮಾತ್ರ ವ್ಯವಹಾರ ಮಾತುಕತೆಯಲ್ಲಿ ಪಾಲುಗೊಳ್ಳುತ್ತಾರೆ. ನನ್ನ ಸಹಿಯನ್ನು ನಾನು ಎಲ್ಲಾ ದಾಖಲೆಗೆ ಹೆಚ್. ಮಂಜು ಎಂದು ಸಹಿ ಮಾಡುತ್ತೇನೆ. ದಾವಾ ಸ್ವತ್ತನ್ನು ನಾನು ಎಷ್ಟು ಹಣ ಕೊಟ್ಟು ಖರೀದಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ

ತಳ ಮಡಿಯಲ್ಲಿ **3** ಅಂಗಡಿ ಮಳಿಗೆಗಳು, **1** ನೇ ಮಹಡಿಯಲ್ಲಿ ಒಂದು ಚಿಕ್ಕ ಮನೆ, ಒಂದು ರೂಂ, ಹಾಗೂ ಅಡಿಗೆ ಮನೆ ಬಾತ್ ರೂಂ ಹಾಗೂ ಹಾಲ್ ಮತ್ತು **2** ನೇ ಮಹಡಿಯಲ್ಲಿ ಎರಡು ರೂಂ, ಹಾಲ್, ಅಡಿಗೆ ಮನೆ ಮತ್ತು ಬಚ್ಚಲು ಮನೆ ಇರುತ್ತದೆ. ದಾವಾ ಸ್ವತ್ತಿನಲ್ಲಿ ನಾನು ನನ್ನ ಗಂಡ ಮತ್ತು ನನ್ನ ಮಾವನೊಂದಿಗೆ ವಾಸ ಮಾಡುತ್ತಿದ್ದೆ ಮತ್ತು ಉಳಿಕೆ ಭಾಗದಲ್ಲಿ ಪ್ರತಿವಾದಿಗಳು ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು **1** ನೇ ಪ್ರತಿವಾದಿ ರಾಮು ರವರು ದಾವಾ ಸ್ವತ್ತನ್ನು ಮಾರಾಟ ಮಾಡಿದ ನಂತರ ದಾವಾ ಸ್ವತ್ತಿನ ನೆಲ ಮಹಡಿಯಲ್ಲಿ ವಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ತಳ ಮಹಡಿಯನ್ನು **1** ನೇ ಪ್ರತಿವಾದಿಗೆ ಎಷ್ಟೊ ಬಾಡಿಗೆ ಹಣಕ್ಕೆ ಬಾಡಿಗೆ ಕೊಟ್ಟಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಲೀಸ್ ಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಎಷ್ಟು ಲೀಸ್ ಹಣಕ್ಕೆ ಬಾಡಿಗೆ ಕೊಟ್ಟಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿ **1** ನೇ ಪ್ರತಿವಾದಿಯು ಖೊಟ್ಟಿ ಜಿಪಿಎ ಕ್ರಯ ಪತ್ರ ಮಾಡಿಕೊಂಡಿರುತ್ತಾರೆ ಎನ್ನುವ ವಿಷಯಕ್ಕೆ ಸಂಬಂಧಿಸಿ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿಲ್ಲ. ಖೊಟ್ಟಿ ಜಿಪಿಎ ಆಧಾರದ ಮೇಲೆ **1** ನೇ ಪ್ರತಿವಾದಿ ಕ್ರಯ ಪತ್ರ ಮಾಡಿಕೊಂಡಿರುವ ವಿಷಯಕ್ಕೆ ಸಂಬಂಧಿಸಿ ಪ್ರತಿವಾದಿಗಳ ದೂರನ್ನು ದಾಖಲಿಸಲು ನಮಗೆ ಯಾವುದೇ ತೊಂದರೆ

ಇರಲಿಲ್ಲ. ಈ ಬಗ್ಗೆ ಪ್ರತಿವಾದಿಗಳಿಗೆ ಲೀಗಲ್ ನೋಟಿಸನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.